ವರ್ಷ ಜಪಾನ್‌ನ ಕಾವಸಕಿಯಲ್ಲಿ ನಡೆದಿದ್ದ ಏಷ್ಯನ್ ಜಂಪ್‌ರೋಪ್ ಚಾಂಪಿಯನ್‌ಷಿಪ್‌ಗೆ ಕೊಪ್ಪಳ ಜಿಲ್ಲೆಯ ಭೀಮಸೇನ ಪರಸಾಪುರ ಹಾಗೂ ಮಂಜುನಾಥ ಚೌಡಕಿ ಆಯ್ಕೆಯಾಗಿದ್ದರು.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಓದಿರುವ ಭೀಮಸೇನ ಪರಸಾಪುರ ಹತ್ತು ವರ್ಷಗಳಿಂದ ಜಂಪ್‌ರೋಪ್ ಕ್ರೀಡೆಯಲ್ಲಿ ತೊಡಗಿದ್ದಾರೆ. ರಾಜ್ಯಮಟ್ಟದಲ್ಲಿ ಏಳು, ರಾಷ್ಟ್ರೀಯ ಮಟ್ಟದಲ್ಲಿ ಆರು ಚಾಂಪಿಯನ್‌ಷಿಪ್‌ಗಳಲ್ಲಿ ಆಡಿದ್ದು, ರಾಷ್ಟ್ರೀಯ ಮಟ್ಟದಲ್ಲಿ ಮೂರು ಬೆಳ್ಳಿ ಮತ್ತು ಮೂರು ಕಂಚಿನ ಪದಕ ಗೆದ್ದುಕೊಂಡಿದ್ದಾರೆ. ಅಂತರ ವಿ.ವಿ. ಕ್ರೀಡಾಕೂಟದಲ್ಲಿ ಧಾರವಾಡ ವಿ.ವಿ. ತಂಡದ ಪರ ಆಡಿದ್ದಾರೆ. ಭೀಮಸೇನ ತಂದೆ ಹೋಟೆಲ್ ನಡೆಸುತ್ತಿದ್ದು, ತಾಯಿ ವಸಂತವ್ವ ಮನೆಕೆಲಸ ಮಾಡಿಕೊಂಡಿದ್ದಾರೆ. ಆರ್ಥಿಕ ಸಂಕಷ್ಟದ ನಡುವೆಯೂ ಕ್ರೀಡಾಸಾಧನೆ ಮಾಡುತ್ತಿದ್ದಾರೆ.


ಪ್ರತಿಭಾನ್ವಿತ ಜಂಪ್‌ರೋಪ್ ಕ್ರೀಡಾಪಟು ಕುಷ್ಟಗಿಯ ಮಂಜುನಾಥ ಚೌಡಕಿ 2022ರಲ್ಲಿ ಭೋಪಾಲ್ ಮತ್ತು 2023ರಲ್ಲಿ ಉಜ್ಜಯಿನಿಯಲ್ಲಿ ಜರುಗಿದ ರಾಷ್ಟ್ರೀಯ ಮಟ್ಟದ ಜಂಪ್‌ರೋಪ್ ಚಾಂಪಿಯನ್‌ಷಿಪ್‌ನಲ್ಲಿ ತಲಾ ಒಂದು ಬೆಳ್ಳಿ, ಕಂಚು ಗೆದ್ದುಕೊಂಡಿದ್ದಾರೆ. ವಿಶ್ವವಿದ್ಯಾಲಯ ಮಟ್ಟದ ಟೂರ್ನಿಯಲ್ಲಿ ಬಳ್ಳಾರಿಯ ಕೃಷ್ಣದೇವರಾಯ ವಿ.ವಿ. ಪ್ರತಿನಿಧಿಸಿದ್ದರು.

### ಶಾಲಾ ಟೂರ್ನಿಗಳೇ ಶಕ್ತಿ



ಜಂಪ್‌ರೋಪ್‌ನಲ್ಲಿ ಸಾಧನೆ ಮಾಡಲು ಬರುವ ಬಹುತೇಕರು ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದಲ್ಲಿ ಓದುತ್ತಿರುತ್ತಾರೆ. ಅವರಿಗೆ ಶಾಲಾ ಟೂರ್ನಿಗಳು ಪ್ರಮುಖ ವೇದಿಕೆ. ಆದ್ದರಿಂದ ಶಾಲಾ ಹಂತದಲ್ಲಿಯೂ ಇನ್ನಷ್ಟು ಟೂರ್ನಿಗಳನ್ನು ಆಯೋಜಿಸಿದರೆ ಕ್ರೀಡೆ ವ್ಯಾಪ್ತಿ ಹೆಚ್ಚುತ್ತದೆ, ಹೊಸಬರು ಬರುತ್ತಾರೆ ಎಂದು ಜಂಪ್‌ರೋಪ್ ತರಬೇತುದಾರರೂ ಆದ ರಾಜ್ಯ ಜಂಪ್‌ರೋಪ್ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಹನುಮಸಾಗರದ ರಜಾಕ್ ಟೇಲರ್ ಹೇಳುತ್ತಾರೆ.

'ಯಾವುದೇ ಕ್ರೀಡೆಯಾದರೂ ಸಾಧನೆಗೆ ಆರ್ಥಿಕ ಭದ್ರತೆ ಹಾಗೂ ಓದಿಗೆ ಅನುಕೂಲ ಇರಬೇಕು. ಆದ್ದರಿಂದ ಸರ್ಕಾರ, ಖಾಸಗಿ ಸಂಸ್ಥೆಗಳು ಜಂಪ್‌ರೋಪ್‌ನಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಪದಕ ಗೆದ್ದ ಕ್ರೀಡಾಪಟುಗಳಿಗೆ ನೌಕರಿ ಅವಕಾಶಗಳನ್ನು ಒದಗಿಸಬೇಕು. ಆಗ ಆಟದ ಪ್ರಗತಿ ಸಾಧ್ಯವಾಗುತ್ತದೆ' ಎನ್ನುತ್ತಾರೆ.



ಜಂಪ್‌ರೋಪ್ ಕ್ರೀಡಾಭ್ಯಾಸದಲ್ಲಿ ಕ್ರೀಡಾಪಟುಗಳು

ರಾಜ್ಯದಲ್ಲಿ ಜಂಪ್‌ರೋಪ್ ಕ್ರೀಡೆಗೆ ಸಂಬಂಧಿಸಿದ ಚಟುವಟಿಕೆಗಳು ಆರಂಭವಾಗಿ ಒಂದೂವರೆ ದಶಕ ಕಳೆದಿದೆ. ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ಹಂತದ ಕ್ರೀಡಾಕೂಟಗಳಲ್ಲಿ ಈ ಕ್ರೀಡೆಗೆ ಅವಕಾಶವಿದೆ. ಪ್ರಗತಿಯ ಹಂತದಲ್ಲಿ ಸಾಗುತ್ತಿರುವ ಈ ಕ್ರೀಡೆಯ ಕೇಂದ್ರ ಹನುಮಸಾಗರದಲ್ಲಿ ಸ್ಥಳೀಯ ಆಡಳಿತದ ನೆರವಿನಿಂದ ಸ್ವಂತ ಒಳಾಂಗಣ ಕ್ರೀಡಾಂಗಣ ನಿರ್ಮಾಣವಾಗಿದೆ. ಹವ್ಯಾಸಕ್ಕಾಗಿ, ದೈಹಿಕ ಸದೃಢತೆಗಾಗಿ ಮಾತ್ರ ಆಡಲಾಗುತ್ತಿದ್ದ ಜಂಪ್ ರೋಪ್ ಈಗ ವೃತ್ತಿಪರ ಸ್ಪರ್ಶ ಪಡೆದುಕೊಂಡಿದೆ. ಹುಬ್ಬಳ್ಳಿಯ ಕೃತಿಕಾ ಹತ್ತಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆಯ 'ಜಂಪ್' ಮಾಡಿದ್ದಾರೆ.

ಆರು ವರ್ಷಗಳ ಹಿಂದೆ ದಕ್ಷಿಣ ಕೊರಿಯಾದ ಇಂಚೆನ್‌ನಲ್ಲಿ ನಡೆದ ಏಷ್ಯಾ ಮತ್ತು ಪೆಸಿಫಿಕ್ ಜಂಪ್‌ರೋಪ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡ ಒಟ್ಟು ಎಂಟು ಪದಕಗಳನ್ನು ಗೆದ್ದುಕೊಂಡಿತು. ಇದರಲ್ಲಿ ಕೃತಿಕಾ 17 ವರ್ಷದ ಮೇಲಿನವರ ವಿಭಾಗದ ಡಬಲ್ ಡಚ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಜಯಿಸಿದ್ದರು.

ಬಾಲಕ ಮತ್ತು ಬಾಲಕಿಯರ 14, 17, 19ರ ಒಳಗೆ ಮತ್ತು 19 ವರ್ಷಕ್ಕಿಂತಲೂ ಮೇಲಿನವರ ವಿಭಾಗದಲ್ಲಿ ಶಾಲಾ, ಕಾಲೇಜುಗಳ ಹಂತದಲ್ಲಿ ಪ್ರತ್ಯೇಕವಾಗಿ ಸ್ಪರ್ಧೆಗಳು ನಡೆಯುತ್ತಿವೆ. 2015ರಲ್ಲಿ ಮೊದಲ ಬಾರಿಗೆ ವಿಶ್ವ ಅಂತರಶಾಲಾ ರೋಪ್ ಸ್ಕಿಪ್ಪಿಂಗ್ ಚಾಂಪಿಯನ್‌ಷಿಪ್ ದುಬೈನಲ್ಲಿ ನಡೆದಿತ್ತು. ಎರಡನೇ ಬಾರಿಗೆ ಹಂಗೇರಿಯಲ್ಲಿ, ನಂತರ ಹಾಂಕಾಂಗ್ ಹಾಗೂ ಬೆಲ್ಜಿಯಂಗಳಲ್ಲಿ ಜರುಗಿತ್ತು.

ಶಾಲಾ ಹಂತದ ಟೂರ್ನಿಗಳಲ್ಲಿ ಉತ್ತಮ ಸಾಮರ್ಥ್ಯ ತೋರಿಸಿದ ಕ್ರೀಡಾಪಟುಗಳಿಗೆ ಅಂತರರಾಷ್ಟ್ರೀಯ ಮಟ್ಟದ ಶಾಲಾ ಟೂರ್ನಿಗಳಲ್ಲಿ ಪಾಲ್ಗೊಳ್ಳಲು ಅವಕಾಶವಿರುವ ಕಾರಣ ಪ್ರಾಥಮಿಕ, ಪ್ರೌಢಶಾಲಾ ಹಂತದ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗುತ್ತಿದ್ದಾರೆ. ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಆರಂಭವಾದ ಸಂಸ್ಥೆ ಜಂಪ್‌ರೋಪ್ ಬೆಳವಣಿಗೆಗೆ ನಡೆಸುತ್ತಿರುವ ಪ್ರಯತ್ನಕ್ಕೆ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಕೂಡ ಕೈ ಜೋಡಿಸಬೇಕಿದೆ.


ಪ್ರತಿಕ್ರಿಯಿಸಿ: feedaback@sudha.co.in




# ಕಪಿಲಾ ಆರೋಗ್ಯಧಾಮ

ಲಯನ್ ಸಫಾರಿ ಸಮೀಪ, ತ್ಯಾವರೆಕೊಪ್ಪ, ಶಿವಮೊಗ್ಗ-577204.

Fatty Liver ಇದೆಯೇ?



ನರದ ತೊಂದರೆಯೇ?



ಚರ್ಮ & ಕೂದಲಿನ ತೊಂದರೆಯೇ?



ಆಯುರ್ವೇದ ಚಿಕಿತ್ಸೆಗಾಗಿ ಇಂದೇ ಸಂಪರ್ಕಿಸಿ

ವಿ.ಸೂ.: ಕ್ಯಾನ್ಸರ್‌ಗೆ ಚಿಕಿತ್ಸೆ ದೊರೆಯುತ್ತದೆ.

07619553245, 08277196659